THE CAMPCO LTD.,

ARECANUT RESEARCH AND DEVELOPMENT FOUNDATION (R).

VIVEKANANDA COLLEGE OF ENGINEERING AND TECHNOLOGY, PUTTUR

ಕೃಷಿ ಯಂತ್ರ ಮೇಳ –II-2012 ರ ಸಂಕ್ಷಿಪ್ತ ವರದಿ

ದೇಶದ ಆರ್ಥಿಕತೆಯ ಜೀವನಾಡಿಯಾದ ಕೃಷಿಕ ಕೂಲಿಕಾರ್ಮಿಕರ ಅಭಾವದಿಂದ ಕೃಷಿಯನ್ನು ನಿಲ್ಲಿಸಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಅವನಲ್ಲಿ ಮತ್ತೆ ಭರವಸೆಯ ಉತ್ಸಾಹ ಮೂಡಿಸುವ ಮಹತ್ವದ ಉದ್ದೇಶದಿಂದ ದಿನಾಂಕ 02.11.2012 ರಿಂದ 04.11.2012 ರ ಪರ್ಯಂತ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾದ ಕ್ಯಾಂಪ್ಕೋ, ಅಡಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ (ರಿ.) ಮತ್ತು ವಿವೇಕಾನಂದ ತಾಂತ್ರಿಕ ಮಹಾವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಈ "ಕೃಷಿ ಯಂತ್ರ ಮೇಳ –II-2012" ರ ಸಂಕ್ಷಿಪ್ತ ವರದಿಯನ್ನು ಮಂಡಿಸಲು ಸಂತೋಷ ಪಡುತ್ತೇವೆ.

ಪ್ರಾರಂಭದಲ್ಲಿ 100 ಕೌಂಟರ್‌ಗಳೆಂದು ಯೋಜಿಸಿದ್ದು, ಈ ಯಂತ್ರ ಮೇಳಕ್ಕೆ ಕೃಷಿಕ ಸಂಶೋಧಕರಿಗೆ ಮತ್ತು ತಾಂತ್ರಿಕ ವಿದ್ಯಾಲಯದ ವಿದ್ಯಾರ್ಥಿಗಳಿಂದ ಕೌಂಟರಿನ ಬೇಡಿಕೆ 156 ಕ್ಕೆ ವಿಸ್ತರಿಸಿದ್ದು ಈ ಕೃಷಿ ಯಂತ್ರ ಮೇಳದ ವೈಶಿಷ್ಟ್ಯಗಳಲ್ಲೊಂದು. ಕೃಷಿಕನ ದೈನಂದಿನ ಜೀವನ ಮತ್ತು ಅವನ ಬೇಸಾಯಕ್ಕೆ ಸಂಬಂಧಿಸಿದ ಸಮಗ್ರ ಮಳಿಗೆಗಳನ್ನೊಳಗೊಂಡ ಕೃಷಿ ಯಂತ್ರ ಮೇಳ –II-2012 ಕ್ಕೆ ಪ್ರೇರಣೆಯಾದದ್ದು ದಿನಾಂಕ 30, 31 ಅಕ್ಟೋಬರ್ ಮತ್ತು ನವೆಂಬರ್ 1, 2009 ರಲ್ಲಿ ಹಮ್ಮಿಕೊಳ್ಳಲಾದ ಅಡಿಕೆ ಯಂತ್ರ ಮೇಳ–I ರ ಅಭೂತಪೂರ್ವ ಯಶಸ್ಸು ಎಂದರೆ ಉತ್ಪ್ರೇಕ್ಷೆಯಾಗದು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಮತ್ತು ಅಡಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ (ರಿ.) ಇದರ ಅಧ್ಯಕ್ಷರಾದ ಪರಮ ಪೂಜ್ಯ ರಾಜರ್ಷಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಈ ಕೃಷಿ ಯಂತ್ರ ಮೇಳ–II-2012 ದ ಗೌರವಾಧ್ಯಕ್ಷರಾಗಿ ಮಾರ್ಗದರ್ಶನ ಮಾಡುತ್ತಿದ್ದು ದಿನಾಂಕ 02.11.2012 ರಂದು ಕೃಷಿ ಯಂತ್ರ ಮೇಳ–II-2012 ರ ವಿಧ್ಯುಕ್ತ ಉದ್ಘಾಟನೆಯನ್ನು ನೆರವೇರಿಸಿ ನೀಡಿದ ಸಂದೇಶ ಅವಿಸ್ಮರಣೀಯ. ಕ್ಯಾಂಪ್ಕೋದ ಅಧ್ಯಕ್ಷರು ಹಾಗೂ ಅಡಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ (ರಿ.) ಮೆನೇಜಿಂಗ್ ಟ್ರಸ್ಟಿಯಾದ ಸನ್ಮಾನ್ಯ ಕೊಂಕೋಡಿ ಪದ್ಮನಾಭರವರು ಪ್ರತಿಹಂತದಲ್ಲೂ ಈ ಯಂತ್ರ ಮೇಳ ಸಂಯೋಜಿಸುವಲ್ಲಿ ತೆಗೆದುಕೊಂಡ ಪರಿಶ್ರಮ ಅಪಾರವಾದದ್ದು. ಇದಕ್ಕಾಗಿ ರಚಿಸಲಾದ ಸಮಿತಿಯ ಪದಾಧಿಕಾರಿಗಳು ಈ ಕೃಷಿ ಯಂತ್ರ ಮೇಳವನ್ನು ಸ್ಮರಣೀಯವಾಗಿಸುವಲ್ಲಿ ನೀಡಿದ ಕೊಡುಗೆ ಉಲ್ಲೇಖನೀಯ. ವಿವೇಕಾನಂದ ತಾಂತ್ರಿಕ ಮಹಾವಿದ್ಯಾಲಯದ ಆಡಳಿತ ಸಮಿತಿ, ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಸಹಕಾರ ಮತ್ತು ತಾಂತ್ರಿಕ ವಿದ್ಯಾಲಯದ ವಿದ್ಯಾರ್ಥಿಗಳ ಪರಿಶ್ರಮವನ್ನು ಉಲ್ಲೇಖಿಸಲು ಹೊರಟರೆ ಹಲವು ಘಂಟೆಗಳ ಸಮಯಬೇಕು. ಬಹುಶ: ವಿವೇಕಾನಂದರ ನುಡಿ "ಉಕ್ಕಿನ ಬಲವುಳ್ಳ 100 ಯುವಕರನ್ನು ನೀಡಿದರೆ ಒಂದು ಸಮರ್ಥ ರಾಷ್ಟ್ರವನ್ನು ಕಟ್ಟಬಹುದೆಂಬ"

ಅಮೃತವಾಣಿ ಅವರ ಹೆಸರನ್ನೇ ಹೊಂದಿದ ಈ ತಾಂತ್ರಿಕ ಮಹಾವಿದ್ಯಾಲಯಕ್ಕೆ ಪ್ರೇರಣೆಯಾಗಿದೆ ಎಂದರೆ ಉತ್ಪ್ರೇಕ್ಷೆಯಾಗದು.

ಈ ಮೂರು ದಿನಗಳ ಕಾಲ ನಡೆದ ಒಟ್ಟು 12 ವಿಚಾರ ಸಂಕಿರಣಗಳಲ್ಲಿ ಮೂಡಿಬಂದ ವಿಷಯಗಳು ಕೃಷಿಕನಿಗೆ ಭವಿಷ್ಯದ ದಿನಗಳಲ್ಲಿ ಪ್ರೇರಣೆಯನ್ನು ನೀಡಬಹುದೆಂಬ ಭಾವನೆಯನ್ನು ಈ ಕೃಷಿಯಂತ್ರ ಮೇಳ ಮೂಡಿಸಿದೆ. ಈ ಕೃಷಿಯಂತ್ರ ಮೇಳದಲ್ಲಿ ನಡೆದ ಬಯಲು ಪ್ರಾತ್ಯಕ್ಷಿಕೆ, ನೆರೆದ ಕೃಷಿಕರಿಗೆ ಅಗಾಧ ಆನಂದವನ್ನು ನೀಡಿದೆಯಲ್ಲದೇ ಕುಮಾರಿ ಕೃಷ್ಣವೇಣಿ ತೆಂಗು ಮರವನ್ನೇರುವ ಮೂಲಕ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ದುಡಿಯಬಹುದೆಂಬ ಭಾವನೆಯನ್ನು ಜಾಗೃತಗೊಳಿಸಿದೆ.

ಈ ಕೃಷಿ ಯಂತ್ರ ಮೇಳದಲ್ಲಿ ದೇಶ ವಿದೇಶಗಳ ಕೃಷಿ ಯಂತ್ರೋಪಕರಣಗಳ 100 ಮಳಿಗೆಗಳು, ಕೃಷಿಕರೇ ಸಂಶೋಧಿಸಿ ಪ್ರದರ್ಶಿಸಿದ 29 ಮಳಿಗೆಗಳು ಭವಿಷ್ಯದಲ್ಲಿ ಕೃಷಿಯನ್ನು ಮುಂದುವರಿಸಬೇಕಾದ ತಾಂತ್ರಿಕ ವಿದ್ಯಾಲಯದ ವಿದ್ಯಾರ್ಥಿಗಳು ಆವಿಷ್ಕರಿಸಿದ 17 ಮಳಿಗೆಗಳು, ಹಾಗೂ ಇತರ ವಾಣಿಜ್ಯ ಮಳಿಗೆಗಳು ಕೃಷಿಕನ ದೈನಂದಿನ ಜೀವನಕ್ಕೆ ಪೂರಕವಾಗಬಲ್ಲ ಮಾಹಿತಿ ನೀಡುವ ಮಳಿಗೆಗಳು, ಬಂದ ಕೃಷಿಕರ ಹಸಿವು, ಬಾಯಾರಿಕೆ ನೀಗಿಸುವ ಮಳಿಗೆಗಳು ಸರಕಾರ ಮತ್ತು ವಾಣಿಜ್ಯ ಬ್ಯಾಂಕ್‌ಗಳ 10 ಮಳಿಗೆಗಳು ಸೇರಿ ಒಟ್ಟು 156 ಮಳಿಗೆಗಳಿದ್ದು, ಕೃಷಿಕನ ಭವಿಷ್ಯದ ದಿನಗಳಿಗೆ ಹೊಸ ಬೆಳಕನ್ನು ನೀಡಿಲಿವೆ. ಕರ್ನಾಟಕ, ಕೇರಳ, ತಮಿಳುನಾಡು, ಆಂದ್ರಪ್ರದೇಶ ಮತ್ತು ಗೋವಾ ರಾಜ್ಯಗಳಿಂದ ಹರಿದು ಬಂದ ಕೃಷಿಕರ ಮಹಾಪೂರ ಸಂಯೋಜಕರ ಮನಸ್ಸಿನಲ್ಲಿ ಹೊಸ ಚೈತನ್ಯವನ್ನು ಮೂಡಿಸಿದೆ. ಕೆಲವು ವಿದೇಶಿ ಪ್ರತಿನಿಧಿಗಳು ಕೂಡ ಕೃಷಿ ಯಂತ್ರ ಮೇಳದಲ್ಲಿ ಭಾಗವಹಿಸಿದ್ದು ಮತ್ತೊಂದು ವಿಶೇಷ. ಈ ಕೃಷಿ ಯಂತ್ರ ಮೇಳದಲ್ಲಿ ಅಂದಾಜು 1.5 ಲಕ್ಷಕ್ಕೂ ಮೀರಿ ಕೃಷಿಕರು ಭಾಗವಹಿಸಿ, ಈ ಕೃಷಿ ಯಂತ್ರ ಮೇಳದ ಪ್ರಯೋಜನ ಪಡೆದಿರುತ್ತಾರೆ.

ಕೃಷಿಯಂತ್ರ ಮೇಳವನ್ನು ಯಶಸ್ವಿಗೊಳಿಸುವಲ್ಲಿ ಪತ್ರಿಕಾ ಮತ್ತು ಮಾಧ್ಯಮದ ಸಹಕಾರವನ್ನು ಕೂಡಾ ಕೃತಜ್ಞಾತಪೂರ್ವಕವಾಗಿ ಸ್ಮರಿಸುತ್ತೇವೆ. ಎರಡು ದಿನ ಸಂಜೆ ಹಮ್ಮಿಕೊಳ್ಳಲಾದ ಸಾಂಸ್ಕೃತಿಕ ಕಾರ್ಯಕ್ರಮವು ವೀಕ್ಷಿಸಿದವರ ಮನಸ್ಸಿನಲ್ಲಿ ಹಚ್ಚ ಹಸುರಾಗಿದೆ. ಅಂತು, ಒಳ್ಳೆಯ ಉದ್ದೇಶದಿಂದ ಯಾವುದೇ ಯೋಜನೆಯನ್ನು ಹಮ್ಮಿಕೊಂಡಾಗ ಅದಕ್ಕೆ ಶ್ರೀದೇವರ ಅನುಗ್ರಹ ಸದಾ ಇರುತ್ತದೆ ಎಂಬುದಕ್ಕೆ ಚಂಡ ಮಾರುತದ ಪ್ರಭಾವದಿಂದ ಎಲ್ಲಾ ಭಾಗಗಳಲ್ಲಿ ಮಳೆಯಾಗುತ್ತಿದ್ದು ಈ ಪರಿಸರದಲ್ಲಿ ದೇವರ ಅನುಗ್ರಹದ ರಕ್ಷಣೆ ದೊರೆತಿರುವುದು ಕೂಡಾ ಸಂಯೋಜಕರಲ್ಲಿ ಧನ್ಯತೆಯ ಭಾವನೆಯನ್ನು ಮೂಡಿಸಿದೆ. ಪ್ರತ್ಯಕ್ಷ, ಪರೋಕ್ಷವಾಗಿ ಈ ಕೃಷಿಯಂತ್ರಮೇಳದ ಯಶಸ್ಸಿನಲ್ಲಿ ಸಹಭಾಗಿಗಳಾದ ಸರ್ವರಿಗೂ ಈ ಮೂರು ಸಂಸ್ಥೆಗಳ ಪರವಾಗಿ ಅನಂತಾನಂತ ಕೃತಜ್ಞತೆಗಳನ್ನು ಮನದಾಳದಿಂದ ಸಲ್ಲಿಸುತ್ತಿದ್ದೇವೆ. ಎರಡನೇ ಕೃಷಿ ಕ್ರಾಂತಿಯ, ಈ ಕೃಷಿ ಇತಿಹಾಸದಲ್ಲಿ ನಮ್ಮ ಈ ಕೃಷಿ ಯಂತ್ರ ಮೇಳ ಒಂದು ವಿನೂತನ ದಾಖಲೆಯನ್ನು ಸ್ಥಾಪಿಸಿದೆ ಎಂಬ ಭಾವನೆಯೊಂದಿಗೆ ಈ ವರದಿಯನ್ನು ಮುಕ್ತಾಯಗೊಳಿಸುತ್ತೇವೆ.

ಜೈ ಕಿಸಾನ್, ಜೈ ಜವಾನ್, ಜೈ ಸಹಕಾರ್